# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2021-22ನೇ ಸಾಲಿನಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮ ಲೆಕ್ಕಶೀರ್ಷಿಕೆ: 2225-03-001-0-05-ಆಬ್ಜೆಕ್ಟೀವ್ ಕೋಡ್-(103)ರಡಿ ಪೂರಕ ಅಂದಾಜು-3ರಲ್ಲಿ ಒದಗಿಸಿರುವ ಅನುದಾನದಲ್ಲಿ ಬಾಕಿ ಅನುದಾನ ರೂ.7000.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:-**

1. 2021-22 ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-5.
2. ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 01 ಬಿಎಂಎಸ್ 2022, ದಿನಾಂಕ:29.03.2022.
3. ಸರ್ಕಾರದ ಆದೇಶ ಸಂಖ್ಯೆ: ಹಿಂವಕ 339 ಬಿಎಂಎಸ್ 2021, ದಿನಾಂಕ: 29.03.2022.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪ್ರಸ್ತಾವನೆ ಸಂಖ್ಯೆ:ಹಿಂವಕಇ/ಸ-5/ಸಿಆರ್-27/2021-22,ದಿ: 30.03.2022.
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 480 ವೆಚ್ಚ-3/2021, ದಿನಾಂಕ: 30.03.2022.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ 2021-22ನೇ ಸಾಲಿನ ಅಯವ್ಯಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ರೂ.6500.00ಲಕ್ಷಗಳ ಅನುದಾನವನ್ನು ಹಾಗೂ ಪೂರಕ ಅಂದಾಜು-1 ಮತ್ತು 2 ರಲ್ಲಿ ಕ್ರಮವಾಗಿ ರೂ.500.00 ಲಕ್ಷ ಹಾಗೂ ರೂ.600.00ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿದ್ದು, ಸದರಿ ಅನುದಾನವನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರಲ್ಲಿ 2021-22ನೇ ಸಾಲಿನ ಪೂರಕ ಅಂದಾಜುಗಳು(ಮೂರನೇ ಕಂತು) ಅಭಿಯಾಚನೆ ಕ್ರಮಾಂಕ-10 ರಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ನಿಗಮ ಲೆಕ್ಕಶೀರ್ಷಿಕೆ:2225-03-001-0-05(103) ರಡಿ ರೂ.20000.00ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3) ರಲ್ಲಿ 2021-22ನೇ ಸಾಲಿಗೆ ವಿವಿಧ ಹಿಂದುಳಿದ ವರ್ಗಗಳ ಸಂಘ/ಸಂಸ್ಥೆಗಳ ಸಮುದಾಯ ಭವನ/ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಅನುದಾನ ಸಲುವಾಗಿ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಲೆಕ್ಕಶೀರ್ಷಿಕೆ:2225-03-001-0-05-ಆಬ್ಜೆಕ್ಟಿವ್‌ಕೋಡ್-(103)ರಡಿ ಒದಗಿಸಿರುವ ಅನುದಾನ ರೂ.13000.00ಲಕ್ಷಗಳನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4) ರ ಪ್ರಸ್ತಾವನೆಯಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು 2021-22ನೇ ಸಾಲಿನ ಪೂರಕ ಅಂದಾಜು-3 ರಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿಯಡಿ ಒದಗಿಸಿರುವ ರೂ.20000.00ಲಕ್ಷಗಳಲ್ಲಿ ಬಾಕಿ ಇರುವ ಅನುದಾನ ರೂ.7000.00ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಹಾಗೂ ಈಗಾಗಲೇ ಬಿಡುಗಡೆಯಾಗಿರುವ ರೂ.13000.00ಲಕ್ಷಗಳಲ್ಲಿ ಸಂಬಂದಪಟ್ಟ ಜಿಲ್ಲಾಧಿಕಾರಿಗಳಿಗೆ ಮರುಬಿಡುಗಡೆ ಮಾಡಿ ಉಳಿದಿರುವ ರೂ.745.17ಲಕ್ಷಗಳನ್ನು ಹಾಗೂ ಬಿಡುಗಡೆಯಾಗಬೇಕಾಗಿರುವ ರೂ.7000.00ಲಕ್ಷಗಳು ಮತ್ತು

--2

30/3/22

ಈಗಾಗಲೇ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುವ ರೂ.12254.3ಲಕ್ಷಗಳಲ್ಲಿ ಅನಿವಾರ್ಯ ಕಾರಣಗಳಿಂದ ವೆಚ್ಚವಾಗದೇ ಉಳಿಯವಾಗಬಹುದಾದ ಅನುದಾನವನ್ನು ಸಹ ಖಜಾನೆಯಿಂದ ಸೆಳೆದು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಹೆಸರಿನಲ್ಲಿ ವಿದ್ಯಾರ್ಥಿ ವೇತನ ಕಾರ್ಯಕ್ರಮ ಅನುಷ್ಠಾನಗೊಳಿಸಲು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕನ್ನಿಂಗ್ ಹ್ಯಾಮ್‌ರಸ್ತೆ ಶಾಖೆಯಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆ ಸಂಖ್ಯೆ: 40774599571 (ಕೆ-2 Recipient ID:0104106786) ರಲ್ಲಿ ಜಮೆ ಮಾಡಿಕೊಳ್ಳಲು ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(5) ರ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು 'ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ನಾಮಧಾರಿ ಸಮುದಾಯ ಅಭಿವೃದ್ಧಿ ಸಂಘ(ರಿ), ಹೊಸುರು ಗ್ರಾಮ ಸಿದ್ದಾಪುರ ಇವರಿಗೆ ಮಂಜೂರಾಗಿ ಬಾಕಿ ಉಳಿದಿರುವ ಅನುದಾನವನ್ನು (ರೂ.1.50ಕೋಟಿ) ಹಾಗೂ ಪೂರಕ ಅಂದಾಜು-3ರಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಒದಗಿಸಲಾದ ರೂ.200.00 ಕೋಟಿಗಳಲ್ಲಿ ವೆಚ್ಚವಾಗದೇ ಬಾಕಿ ಉಳಿಯುವ ಅನುದಾನವನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕನ್ನಿಂಗ್ ಹ್ಯಾಮ್‌ರಸ್ತೆ ಶಾಖೆಯಲ್ಲಿ ತೆರೆಯಲಾಗಿರುವ ಬ್ಯಾಂಕ್ ಖಾತೆ ಸಂಖ್ಯೆ: 40774599571 (ಕೆ-2 Recipient ID:0104106786) ರಲ್ಲಿ ಜಮೆ ಮಾಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಆರ್ಥಿಕ ಇಲಾಖೆ ಸಹಮತಿಸಿದೆ.

- ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿಒದಗಿಸಲಾಗಿರುವ ರೂ.200.00ಕೋಟಿಗಳಲ್ಲಿ ಇಲಾಖೆಯಲ್ಲಿ ಅನುದಾನ ಬಿಡುಗಡೆ ಮಾಡಲು ಬಾಕಿ ಇರುವ ಎಲ್ಲಾ ಅರ್ಹ ಪ್ರಸ್ತಾವನೆಗಳಿಗೆ ಕೂಡಲೇ ಅನುದಾನ ಬಿಡುಗಡೆ ಮಾಡಿ ಉಳಿದ ಮೊತ್ತವನ್ನು ಬ್ಯಾಂಕ್ ಖಾತೆಯಲ್ಲಿಡತಕ್ಕದ್ದು.

- ಸದರಿ ಮೊತ್ತವನ್ನು ಬಾಕಿ ಉಳಿದಿರುವ ಅರ್ಹ ಪ್ರಸ್ತಾವನೆಗಳಿಗೆ ಮಾತ್ರ(to clear off the pending commitments) ಉಪಯೋಗಿಸತಕ್ಕದ್ದು ಹಾಗೂ ಈ ಮೊತ್ತದಿಂದ ಯಾವುದೇ ಹೊಸ ಪ್ರಸ್ತಾವನೆಗಳಿಗೆ ಅನುದಾನ ಬಿಡುಗಡೆ ಮಾಡುವಂತಿಲ್ಲ

ಎಂದು ಅಭಿಪ್ರಾಯಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 339 ಬಿಎಂಎಸ್ 2021</u>**
**<u>ಬೆಂಗಳೂರು, ದಿನಾಂಕ:30.03.2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನ ಪೂರಕ ಅಂದಾಜು-3 ನಲ್ಲಿ ಒದಗಿಸಿರುವ ರೂ.20000.00 ಲಕ್ಷಗಳಲ್ಲಿ ಬಾಕಿ ಅನುದಾನ ರೂ.7000.00ಲಕ್ಷಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆಗೊಳಿಸಿ ಆದೇಶಿಸಿದೆ.

ಪ್ರಸ್ತುತ ಬಿಡುಗಡೆಗೊಳಿಸುತ್ತಿರುವ ರೂ.7000.00ಲಕ್ಷಗಳನ್ನು ಹಾಗೂ ಈಗಾಗಲೇ ಬಿಡುಗಡೆಗೊಳಿಸಲಾಗಿದ್ದ ರೂ.13000.00ಲಕ್ಷಗಳಲ್ಲಿ ವೆಚ್ಚ ಭರಿಸಿ ಬಾಕಿ ಉಳಿದಿರುವ ರೂ.745.17ಲಕ್ಷಗಳನ್ನು ಮತ್ತು ಈಗಾಗಲೇ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುವ

--3

30/3/22